ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-560 041, ದೂರವಾಣಿ:080-26961928

ಆರ್‌ಜಿಯು/ಜಿಇಎನ್/ಡಿಸ್‌ಪೋಸಲ್/101/2021-22 ದಿನಾಂಕ: 13/06/2022

ಗೆ,

ಎಲ್ಲಾ ನೋಡಲ್ ಅಧಿಕಾರಿಗಳು
ವಿಶ್ವವಿದ್ಯಾಲಯದ ಬೆಂಗಳೂರು ಪರೀಕ್ಷಾ ಕೇಂದ್ರಗಳು
ಬೆಂಗಳೂರು

ಮಾನ್ಯರೇ,

ವಿಷಯ: ವಿಶ್ವವಿದ್ಯಾಲಯದಿಂದ ನಡೆಸಿರುವ ಎಲ್ಲಾ ನಿಖಾಯಗಳ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಅವಧಿ ಪೂರ್ಣಗೊಂಡಿರುವ ಹಳೆಯ ಉತ್ತರ ಪತ್ರಿಕೆಗಳು ಹಾಗೂ ಇತರೆ ಅನುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: ಮೆ॥ ಕೊಲಂಬಿಯಾ ವೇಸ್ಟ್ ಪೇಪರ್ ಮಾರ್ಟ್, ಬೆಂಗಳೂರು ಇವರಿಗೆ ನೀಡಿರುವ ಕಾರ್ಯಾದೇಶ ದಿನಾಂಕ 08/02/2022.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದಿಂದ ನಡೆಸಿರುವ ಎಲ್ಲಾ ನಿಖಾಯಗಳ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ತಮ್ಮ ಪರೀಕ್ಷಾ ಕೇಂದ್ರಗಳಲ್ಲಿ ಪೆರಿಪೆರಲ್ ಸ್ಕ್ಯಾನಿಂಗ್ ಆದ ನಂತರ ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರ ಅವಧಿ ಪೂರ್ಣಗೊಂಡಿರುವ ಅಂದರೆ ದಿನಾಂಕ 31-05-2021ರವರೆಗಿನ ಉತ್ತರ ಪತ್ರಿಕೆಗಳನ್ನು ಹಾಗೂ ಇತರೆ ಅನುಪಯುಕ್ತ ವಸ್ತುಗಳನ್ನು ಆಯಾ ಪರೀಕ್ಷಾ ಕೇಂದ್ರಗಳಲ್ಲಿ ವಿಲೇವಾರಿ ಮಾಡಲು ಮೆ॥ ಕೊಲಂಬಿಯಾ ವೇಸ್ಟ್ ಪೇಪರ್ ಮಾರ್ಟ್, ಬೆಂಗಳೂರು ಇವರಿಗೆ ವಿಲೇವಾರಿ ಮಾಡುವ ಬಗ್ಗೆ ದರದ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. (ಸದರಿ ಕಾರ್ಯಾದೇಶದ ಪ್ರತಿಯನ್ನು ಲಗತ್ತಿಸಲಾಗಿದೆ). ಆದ್ದರಿಂದ ತಮ್ಮ ಪರೀಕ್ಷಾ ಕೇಂದ್ರದಲ್ಲಿ ಅವಧಿ ಮೀರಿರುವ ಹಳೆಯ ಉತ್ತರ ಪತ್ರಿಕೆಗಳನ್ನು ಕ್ರೋಡಿಕರಿಸಿಕೊಂಡು ವಿವರಗಳನ್ನು ವಹಿಯಲ್ಲಿ ನಮೂದಿಸಿ ನಂತರ ವಿಲೇವಾರಿ ಮಾಡುವ ದಿನಾಂಕವನ್ನು ಮುಂಚಿತವಾಗಿ ವಿಶ್ವವಿದ್ಯಾಲಯಕ್ಕೆ ತಿಳಿಸಿದರೆ ವಿಶ್ವವಿದ್ಯಾಲಯದ ಅಧಿಕಾರಿಯವರ ನೇತೃತ್ವದಲ್ಲಿ ಮೆ॥ ಕೊಲಂಬಿಯಾ ವೇಸ್ಟ್ ಪೇಪರ್ ಮಾರ್ಟ್ ಇವರ ಮೂಲಕ ವಿಲೇವಾರಿ ಮಾಡುವ ಕಾರ್ಯವನ್ನು ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ಕುಲಸಚಿವರು (ಮೌಲ್ಯಮಾಪನ)

ಪ್ರತಿಗಳು:

1. ಆಪ್ತ ಸಹಾಯಕರು ಕುಲಪತಿಗಳು, ರಾ.ಗಾ.ಆ.ವಿ.ವಿಶ್ವವಿದ್ಯಾಲಯ
2. ಆಪ್ತ ಸಹಾಯಕರು ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ)/ಹಣಕಾಸು ಅಧಿಕಾರಿಗಳು ರಾ.ಗಾ.ಆ.ವಿ.ವಿಶ್ವವಿದ್ಯಾಲಯ
3. ಪರೀಕ್ಷಾ ಕೇಂದ್ರಗಳ ಮೇಲ್ವಿಚಾರಕರು, ರಾ.ಗಾ.ಆ.ವಿ.ವಿಶ್ವವಿದ್ಯಾಲಯ ಮಾಹಿತಿಗಾಗಿ
4. ಕಛೇರಿ ಪ್ರತಿ